ಪೂರ್ವ ನಿಯೋಜಿತ ಕಾರ್ಯಕ್ರಮದಂತೆ ಅಧ್ಯಕ್ಷರು ಸಭೆಗೆ ಹಾಜರಾಗಲು ಸಾಧ್ಯವಾಗದುದರಿಂದ **ಪ್ರೊ. ಮೊರಬದ ಮಲ್ಲಿಕಾರ್ಜುನ,** ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ, ಜೆಎಸ್ಎಸ್ ಮಹಾವಿದ್ಯಾಪೀಠ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

**35.1 ಸ್ವಾಗತ**

ಪ್ರಾಚಾರ್ಯರಾದ ಡಾ. ಎನ್. ಮಹದೇವಸ್ವಾಮಿಯವರು ಸಭೆಯಲ್ಲಿದ್ದ ಎಲ್ಲರನ್ನು ಸ್ವಾಗತಿಸಿದರು.

**35.2 ಹಿಂದಿನ ಸಭೆ ನಡವಳಿಗಳನ್ನು ಓದಿ ರೆಕಾರ್ಡ್ ಮಾಡುವುದು**

ದಿನಾಂಕ: 19.03.2021 ರಂದು ನಡೆದ 34 ನೇ ಗೌರ್ನಿಂಗ್ ಕೌನ್ಸಿಲ್ ಸಭೆಯ ನಡವಳಿಗಳನ್ನು ಎಲ್ಲಾ ಸದಸ್ಯರುಗಳಿಗೆ ದಿನಾಂಕ: 20.04.2021 ರಂದು ಕಳುಹಿಸಲಾಗಿದೆ. ಯಾವುದೇ ತಿದ್ದುಪಡಿ ಸೂಚನೆ ಬಂದಿರುವುದಿಲ್ಲ. ಆದ್ದರಿಂದ ಅನುಮೋದನೆಗೆ ಮಂಡಿಸಿದೆ.

**35.3 ಅಲ್ಪಾವಧಿ ಕಂಪ್ಯೂಟರ್ ಕೋರ್ಸ್ ಬಗ್ಗೆ**

**32.3, 33.3, 34.3: ಸಭೆಗಳ ತೀರ್ಮಾನ**

ಶ್ರೀ ಎಂ.ಜೆ. ಪ್ರಕಾಶ, ದ್ವಿ.ದ.ಸ ಮತ್ತು ಕಂಪ್ಯೂಟರ್ ಉಪನ್ಯಾಸಕರನ್ನು ಶ್ರೀ ಎನ್. ಮಲ್ಲೇಶ್, ಬೆರಳಚ್ಚುಗಾರರು ನಿವೃತ್ತರಾದ ಹಿನ್ನೆಲೆಯಲ್ಲಿ ಸದರಿಯವರ ಸ್ಥಾನದಲ್ಲಿ ಪರೀಕ್ಷೆ ಕೆಲಸಗಳನ್ನು ನಿರ್ವಹಿಸಲು ನಿಯೋಜನೆ ಮಾಡಿದ್ದರಿಂದ ಅಲ್ಪಾವಧಿ ಕಂಪ್ಯೂಟರ್ ತರಗತಿಗಳನ್ನು ನಡೆಸಿಲ್ಲ. ಪ್ರಸಕ್ತ ಸಾಲಿನ Even Semester ಭೌತಿಕ ತರಗತಿಗಳು ಪ್ರಾರಂಭವಾದ ನಂತರ ಕಂಪ್ಯೂಟರ್ ಕೋರ್ಸ್ ತರಗತಿಗಳನ್ನು ನಡೆಸಲು ತೀರ್ಮಾನಿಸಲಾಯಿತು.

**ಕೈಗೊಂಡಿರುವ ಕ್ರಮಗಳು**

ಕೊರೋನ-19 ರ 2ನೇ ಅಲೆ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ದಿನಾಂಕ: 28.04.2021 ರಿಂದ ಲಾಕ್‌ಡೌನ್ ಘೋಷಣೆ ಮಾಡಿದ್ದರಿಂದ ಭೌತಿಕ ತರಗತಿಗಳು ದಿನಾಂಕ: 25.07.2021 ರಿಂದ ಆರಂಭವಾಗಿದ್ದು, ಸೆಪ್ಟಂಬರ್-2021ರ ಮಾಹೆಯಲ್ಲಿ ಪದವಿ ಪರೀಕ್ಷೆಗಳು ಆರಂಭವಾಗುವುದರಿಂದ 2021-22ನೇ ಶೈಕ್ಷಣಿಕ ಸಾಲಿನ ತರಗತಿಗಳು ಪ್ರಾರಂಭವಾದ ನಂತರ ಆಡಳಿತ ಮಂಡಳಿ ಅನುಮತಿ ಪಡೆದು ಅಲ್ಪಾವಧಿ ಕಂಪ್ಯೂಟರ್ ಕೋರ್ಸ್ ತರಗತಿಗಳನ್ನು ನಡೆಸಲಾಗುವುದು.

**ಈ ಸಭೆಯ ತೀರ್ಮಾನ**

2021–22ನೇ ಶೈಕ್ಷಣಿಕ ಸಾಲಿನ ತರಗತಿಗಳು ಪ್ರಾರಂಭವಾದ ನಂತರ ಆಡಳಿತ ಮಂಡಳಿ ಅನುಮತಿ ಪಡೆದು ಅಲ್ಪಾವಧಿ ಕಂಪ್ಯೂಟರ್ ಕೋರ್ಸ್ ತರಗತಿಗಳನ್ನು ನಡೆಸಲು ಸಭೆ ಸೂಚಿಸಿತು.

**35.3 ಸರ್ಕಾರದಿಂದ ಮರುಭರಿಕೆಯಾಗಬೇಕಾಗಿರುವ ಬಿಸಿಎಂ ವಿದ್ಯಾರ್ಥಿಗಳ ಶುಲ್ಕ ಮರುಭರಿಕೆ**

**32.3, 33.3, 34.3: ಸಭೆಗಳ ತೀರ್ಮಾನ**

ಪ್ರಸಕ್ತ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ 403 ಬಿ.ಸಿ.ಎಂ. ವಿದ್ಯಾರ್ಥಿಗಳಿಂದ ಶುಲ್ಕ ಮರುಭರಿಕೆಗೆ ಅರ್ಜಿಗಳನ್ನು ಸಲ್ಲಿಸಿ ಎಲ್ಲರಿಗೂ ಶುಲ್ಕಗಳನ್ನು ಮಂಜೂರು ಮಾಡಿಸಲು ತೀರ್ಮಾನಿಸಲಾಯಿತು.

**ಕೈಗೊಂಡಿರುವ ಕ್ರಮಗಳು**

2020-21ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ 403 ಅರ್ಹ ಬಿ.ಸಿ.ಎಂ. ವಿದ್ಯಾರ್ಥಿಗಳಲ್ಲಿ 313 ಅರ್ಜಿಗಳನ್ನು ಆನ್‌ಲೈನ್ ಮುಖಾಂತರ E-Attestation Officer ರವರಿಂದ ಪರಿಶೀಲನೆ ಮಾಡಿ, ದೃಢೀಕರಿಸಿ ಅಪ್‌ಲೋಡ್ ಮಾಡಲಾಗಿದೆ. ಉಳಿದ 90 ವಿದ್ಯಾರ್ಥಿಗಳ ಅರ್ಜಿಗಳಲ್ಲಿ ಅಡಕಗಳು, ಮೊಬೈಲ್ ಸಂಖ್ಯೆಗಳ ನ್ಯೂನ್ಯತೆಗಳಿದ್ದು, ಸರಿಪಡಿಸಲು ವಿದ್ಯಾರ್ಥಿಗಳಿಗೆ ತಿಳಿಸಲಾಗಿದೆ. ಕಡೆಯ ದಿನಾಂಕ: 31.08.2021 ರೊಳಗೆ ಅಪ್‌ಲೋಡ್ ಮಾಡಲು ಕ್ರಮಕೈಗೊಳ್ಳಲಾಗುವುದು.

ಈ ಸಭೆಯ ತೀರ್ಮಾನ

ಸರ್ಕಾರದಿಂದ ಮಂಜೂರಾಗಬೇಕಾಗಿರುವ ಬಿ.ಸಿ.ಎಂ., ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳಿಗೂ ಶುಲ್ಕ ಮತ್ತು ವಿದ್ಯಾರ್ಥಿವೇತನ ಮಂಜೂರು ಮಾಡಿಸಲು ಹೆಚ್ಚಿನ ಗಮನ ಹರಿಸಿ ಎಲ್ಲರಿಗೂ ಮಂಜೂರು ಮಾಡಿಸಲು ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.

## 35.3 ಪದವಿ ಫಲಿತಾಂಶ ಉತ್ತಮಪಡಿಸುವುದು

**32.3, 33.3, 34.3: ಸಭೆಗಳ ತೀರ್ಮಾನ**

- ಫಲಿತಾಂಶ ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳನ್ನು ಕಾರ್ಯಸೂಚಿಯಲ್ಲಿ ದಾಖಲಿಸಲು ತೀರ್ಮಾನಿಸಲಾಯಿತು.
- ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಡುಗೆಯಾಗಿ ನೀಡಲು ಪ್ರೊ. ಸಿ ನಾಗಣ್ಣರವರು ಸಲಹೆ ನೀಡಿದರು.
- ಅಧ್ಯಾಪಕರುಗಳು ಇನ್ನು ಹೆಚ್ಚಿನ ಆಸಕ್ತಿ ಹಾಗೂ ಶ್ರಮವಹಿಸಿ ಉತ್ತಮ ಫಲಿತಾಂಶ ತರಲು ಶ್ರಮಿಸಬೇಕೆಂದು ಶ್ರೀ ಬಿ. ನಿರಂಜನಮೂರ್ತಿ, ಸಹಾಯಕ ನಿರ್ದೇಶಕರು ತಿಳಿಸಿದರು.

**ಕೈಗೊಂಡಿರುವ ಕ್ರಮಗಳು**

- ಕಡಿಮೆ ಫಲಿತಾಂಶ ಬಂದಿರುವ ವಿಷಯಗಳನ್ನ ಬೋಧಿಸುವ ಉಪನ್ಯಾಸಕರ ಸಭೆ ಕರೆದು ಶೈಕ್ಷಣಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಗುರುತಿಸಿ ವಿಶೇಷ ತರಗತಿಗಳನ್ನು ನಡೆಸಲು ತಿಳಿಸಲಾಗಿದೆ.
- ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಆಚರಿಸುವ ಜಯಂತಿ ಮಹೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ ಸನ್ಮಾನಿಸಲಾಗುವುದು.
- ಕಾಲೇಜಿನಲ್ಲಿ ಫಲಿತಾಂಶ ಉತ್ತಮಪಡಿಸಲು ಅಧ್ಯಾಪಕರುಗಳು ತೆರೆದ ಪುಸ್ತಕ ಪರೀಕ್ಷೆಗಳು, ಯುನಿಟ್ ಟೆಸ್ಟ್, ಹಿಂದಿನ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಪುನರಾವರ್ತನೆ ಮಾಡುವ ಮೂಲಕ ಕ್ರಮಕೈಗೊಳ್ಳಲಾಗಿದೆ.

**ಈ ಸಭೆಯ ತೀರ್ಮಾನ**

ಪ್ರೀತಿಯಿಂದ ವಿದ್ಯಾರ್ಥಿಗಳ ಮನವೋಲಿಸಿ ಆಂಗ್ಲಭಾಷೆ ಫಲಿತಾಂಶವನ್ನು ಉತ್ತಮಪಡಿಸಲು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು. ಹಾಗೂ ದಾಖಲಾತಿ ಕಡಿಮೆ ಇದ್ದರೂ ಫಲಿತಾಂಶ ಉತ್ತಮಪಡಿಸಲು ಸಾಧ್ಯವಾಗಿಲ್ಲ ಉತ್ತಮ ಫಲಿತಾಂಶ ಬಂದರೆ ದಾಖಲಾತಿ ತಾನಾಗಿಯೇ ಅಭಿವೃದ್ಧಿಪಡಿಸಬಹುದೆಂದು ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ತಿಳಿಸಿದರು.

## 35.3 ಪೋಷಕರ ಸಭೆ

**32.3, 33.3, 34.3: ಸಭೆಗಳ ತೀರ್ಮಾನ**

- ಪ್ರತಿ ಶೈಕ್ಷಣಿಕ ವರ್ಷದಲ್ಲಿ ಎರಡು ಸಭೆಗಳನ್ನು ಮಾಡಿ ನಡವಳಿಗಳನ್ನು ಆಡಳಿತ ಮಂಡಳಿಗೆ ಕಳುಹಿಸಲು ತೀರ್ಮಾನಿಸಿತು.
- ಅತಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳ ಪೋಷಕರುಗಳನ್ನು ಕಾಲೇಜಿನಲ್ಲಿ ನಡೆಯುವ ಜಯಂತಿ ಮಹೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಲು ಕ್ರಮಕೈಗೊಳ್ಳಬೇಕೆಂದು ತೀರ್ಮಾನಿಸಿತು.

**ತೆಗೆದುಕೊಂಡಿರುವ ಕ್ರಮಗಳು**

- ದಿನಾಂಕ: 26.08.2021 ರಂದು ಪೋಷಕರ ಸಭೆ ನಡೆಸಲಾಯಿತು.
- ಕೋವಿಡ್-19 ರ ಹಿನ್ನಲೆಯಲ್ಲಿ ಕಾಲೇಜಿನಲ್ಲಿ ಜಯಂತಿ ಮಹೋತ್ಸವ ಕಾರ್ಯಕ್ರಮವನ್ನು ನಡೆಸಲು ಸಾಧ್ಯವಾಗಿಲ್ಲ. ಮುಂದೆ ನಡೆಯುವ ಜಯಂತಿ ಮಹೋತ್ಸವ ಕಾರ್ಯಕ್ರಮಕ್ಕೆ ಅತಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳ ಪೋಷಕರುಗಳನ್ನು ಆಹ್ವಾನಿಸಲು ಕ್ರಮಕೈಗೊಳ್ಳುತ್ತೇವೆ.

**ಕೈಗೊಂಡಿರುವ ಕ್ರಮಗಳು**

- ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಕಿರಿಯ ಉಪನ್ಯಾಸಕರ ಸಭೆ ಕರೆದು, ಹಿರಿಯ ಉಪನ್ಯಾಕರಿಂದ ಸಲಹೆ ಮತ್ತು ಮಾರ್ಗದರ್ಶನ ಪಡೆದು ವರ್ಷದಲ್ಲಿ 2 ಲೇಖನಗಳನ್ನು ಕಡ್ಡಾಯವಾಗಿ ಪ್ರಕಟಿಸಬೇಕೆಂದು ತಿಳಿಸಲಾಗಿದೆ.
- ಸಂಶೋಧನ ಲೇಖನಗಳನ್ನು ಪ್ರಕಟಿಸುವ ಸಂಬಂಧ ಅಧ್ಯಾಪಕರ ಸಭೆ ಕರೆದು ಹೆಚ್ಚು ಪ್ರಬಂಧ ಮತ್ತು ಲೇಖನಗಳನ್ನು ಪ್ರಕಟಿಸುವ ಮೂಲಕ ತಮ್ಮ ಕೌಶಲ್ಯ ಅಭಿವೃದ್ಧಪಡಿಸಿಕೊಳ್ಳಲು ತಿಳಿಸಲಾಗಿದೆ.

**ಈ ಸಭೆಯ ತೀರ್ಮಾನ**

- ಬಹುಪಾಲು ಅಧ್ಯಾಪಕರು ಲೇಖನ ಪ್ರಕಟಿಸಲು ಪ್ರಯತ್ನಪಡುತ್ತಿರುವುದಾಗಿ ಪ್ರಾಚಾರ್ಯರು ಸಭೆಗೆ ತಿಳಿಸಿದರು.
- NET/SLET ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಉಪನ್ಯಾಸಕರುಗಳನ್ನೆ ನೇಮಕ ಮಾಡಲು ತೀರ್ಮಾನವಾಗಿದ್ದು, ಈಗ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರು ಕಡ್ಡಾಯವಾಗಿ NET/SLET ಗಳನ್ನು ಮಾಡಿಕೊಳ್ಳಬೇಕೆಂದು ನಿರ್ದೇಶಕರು ತಿಳಿಸಿದರು.
- ನ್ಯಾಕ್ ಹಿತದೃಷ್ಟಿಯಿಂದ ಕಡ್ಡಾಯವಾಗಿ ಎಲ್ಲಾ ಉಪನ್ಯಾಸಕರುಗಳು ಲೇಖನ ಪ್ರಕಟಿಸಲು ಕ್ರಮಕೈಗೊಳ್ಳಬೇಕೆಂದು ಡಾ. ಸಿ. ನಾಗಣ್ಣ ರವರು ತಿಳಿಸಿದರು.
- ಪಿ.ಹೆಚ್‌ಡಿ ನೋಂದಾಯಿಸಿಕೊಳ್ಳಲು ಉಪನ್ಯಾಸಕರುಗಳಿಗೆ ತಿಳಿಸಬೇಕೆಂದು ತೀರ್ಮಾನಿಸಲಾಯಿತು.
- ಅಧ್ಯಾಪಕರುಗಳು ಕಡ್ಡಾಯವಾಗಿ ಲೇಖನ ಪ್ರಕಟಿಸಲು, ವಿಚಾರ ಸಂಕಿರಣ/ವೆಬಿನಾರ್‌ಗಳಲ್ಲಿ ಭಾಗವಹಿಸಲು ಹಾಗೂ ವಿಭಾಗವಾರು ವೆಬಿನಾರ್ ಆಯೋಜಿಸಲು ಕ್ರಮಕೈಗೊಳ್ಳಲು ತಿಳಿಸಬೇಕೆಂದು ಕಾರ್ಯನಿರ್ವಾಹಕ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

## 35.6 ಕಾಲೇಜಿನ ಪ್ರಗತಿ ಪರಿಶೀಲನೆ

**32.6, 33.6, 34.6: ಹಿಂದಿನ ಸಭೆಯ ತೀರ್ಮಾನ**

ನೈಪುಣ್ಯ ಹೊಂದಿರುವ ಅಧ್ಯಾಪಕರುಗಳನ್ನು ಕರೆಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ತರಗತಿಗಳನ್ನು ನಡೆಸಲು ಸಭೆ ತೀರ್ಮಾನಿಸಲಾಯಿತು.

**ತೆಗೆದುಕೊಂಡಿರುವ ಕ್ರಮಗಳು**

ನೈಪುಣ್ಯ ಹಾಗೂ ವೃತ್ತಿಪರ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವ ತಯಾರಿ ತರಬೇತಿ ತರಗತಿಗಳನ್ನು ನಡೆಸಲಾಗುತ್ತದೆ.

**ಈ ಸಭೆಯ ತೀರ್ಮಾನ**

ಪ್ರತಿದಿನ ತರಗತಿ ಪ್ರಾರಂಭಕ್ಕೆ ಮೊದಲು ಪ್ರಾರ್ಥನೆ ಸಂಧರ್ಭದಲ್ಲಿ ಮೌಲ್ಯಯುತ ಸೂಕ್ತಿಗಳನ್ನು ಓದಿಸುವ ಹಾಗೂ ನುರಿತ ಹಾಗೂ ವೃತ್ತಿಪರ ಸಂಪನ್ಮೂಲ ವ್ಯಕ್ತಿಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವ ತಯಾರಿ ಮಾಡುವುದು ಉತ್ತಮ ಕಾರ್ಯಕ್ರಮಗಳಾಗಿದ್ದು ಮುಂದುವರೆಸಲು ಸಭೆ ತೀರ್ಮಾನಿಸಿತು.

**ಸದಸ್ಯರುಗಳ ಸಲಹೆಗಳು**

- ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಕಾಲೇಜಿಗೆ ಕರೆಸಿ IAS, KAS ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ವಿದ್ಯಾರ್ಥಿಗಳಿಗೆ ಕೊಡಿಸಿರುವುದಾಗಿ ಪ್ರಾಚಾರ್ಯರು ಸಭೆಗೆ ತಿಳಿಸಿದರು.
- 6 ತಿಂಗಳಿಗೊಂದು ಬಾರಿ ಕಾಲೇಜಿನಲ್ಲಿ ನಡೆದ ಚಟುವಟಿಕೆಗಳ ಬಗ್ಗೆ ವರದಿಯನ್ನು ನೀಡಲು ನಿರ್ದೇಶಕರು ತಿಳಿಸಿರುತ್ತಾರೆ.

- ಪ್ರವೇಶವನ್ನು ಅಭಿವೃದ್ಧಿಪಡಿಸಲು ಎಲ್ಲಾ ಉಪನ್ಯಾಸಕರು ಸಹಕರಿಸಲು ಹಾಗೂ ಅಧ್ಯಾಪಕೇತರ ನೌಕರರು ಸಹ ದಾಖಲಾತಿ ಉತ್ತಮಪಡಿಸಲು ಸಹಕರಿಸಬೇಕೆಂದು ನಿರ್ದೇಶಕರು ತಿಳಿಸಿದರು.
- ಪ್ರಾಚಾರ್ಯರು ಎಲ್ಲಾ ನೌಕರ ವರ್ಗದವರ ಸಹಕಾರ ಪಡೆದು ದಾಖಲಾತಿ ಉತ್ತಮಪಡಿಸಲು ತುಂಬಾ ಗಂಭೀರವಾಗಿ ಕ್ರಮವಹಿಸಲು ನಿರ್ದೇಶಕರು ತಿಳಿಸಿದರು.
- ಕಾಲೇಜಿನ ವೆಬ್‌ಸೈಟ್‌ನಲ್ಲಿ ಕಾಲೇಜಿನ ಎಲ್ಲಾ ಚಟುವಟಿಕೆಗಳನ್ನು ಅಪ್‌ಲೋಡ್ ಮಾಡಲು ಕ್ರಮವಹಿಸಲು ಡಾ. ಹೆಚ್.ಎಸ್. ನಾಗೇಂದ್ರಸ್ವಾಮಿಯವರು ತಿಳಿಸಿದರು.
- ಪ್ರತಿ ವರ್ಷದ ವಿದ್ಯಾರ್ಥಿಗಳ ಮಾಹಿತಿ ಏನೇನು ಕಾರ್ಯಕ್ರಮಗಳು ನಡೆಯುತ್ತವೆ ಎಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ಕ್ರಮವಹಿಸಲು ಡಾ. ಹೆಚ್.ಎಸ್. ನಾಗೇಂದ್ರಸ್ವಾಮಿಯವರು ತಿಳಿಸಿದರು.
- ದಾಖಲಾದ ವಿದ್ಯಾರ್ಥಿಗಳಲ್ಲಿ ಪ್ರತಿ ವರ್ಷ Drop out ಆಗುತ್ತಾರೆ. ಆದ್ದರಿಂದ ತುಂಬಾ ಜಾಗರೂಕತೆ ವಹಿಸಿ ದಾಖಲತಿ ಹೆಚ್ಚಿಸಲು ಶ್ರಮವಹಿಸಬೇಕೆಂದು ನಿರ್ದೇಶಕರು ತಿಳಿಸಿದರು.
- ಪೋಷಕರನ್ನು ಕರೆಸಿ ವಿದ್ಯಾರ್ಥಿಗಳನ್ನು ಕಾಲೇಜು ಬಿಡಿಸದಂತೆ ಮನವರಿಕೆ ಮಾಡಲು ಡಾ. ಸಿ. ನಾಗಣ್ಣರವರು ಸಲಹೆ ನೀಡಿದರು.
- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿರುವುದು, ಲೇಖನ ಪ್ರಕಟಣೆ, ವಿಚಾರ ಸಂಕಿರಣಗಳು, ವಿಶೇಷ ಉಪನ್ಯಾಸಗಳು, ಅಧ್ಯಾಪಕರ ಸಾಧನೆ, ವಿದ್ಯಾರ್ಥಿಗಳ ಸಾಧನೆಗಳನ್ನೊಳಗೊಂಡ ಮಾಹಿತಿಗಳಿರುವ ಕಾಂಪೆಂಡಿಯಮ್ ತಯಾರಿಸಿ ವಿದ್ಯಾರ್ಥಿಗಳಿಗೆ ತಿಳಿಸಲು ಡಾ. ಹೆಚ್.ಎಸ್. ನಾಗೇಂದ್ರಸ್ವಾಮಿಯವರು ತಿಳಿಸಿದರು.
- 2021-22ನೇ ಶೈಕ್ಷಣಿಕ ಸಾಲಿನಲ್ಲಿ ದಾಖಲಾತಿ 500 ದಾಟಲು ಪ್ರಯತ್ನಪಡಬೇಕೆಂದು ನಿರ್ದೇಶಕರು ಸಲಹೆ ನೀಡಿದರು.
- ಪಠ್ಯೇತರ ಚಟುವಟಿಕಗಳಾದ ಕ್ರೀಡೆ, ಸಾಂಸ್ಕೃತಿಕ, ಸಾಹಿತ್ಯಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ವಿದ್ಯಾರ್ಥಿಗಳನ್ನು ಆಕರ್ಷಿಸಲು ಕ್ರಮವಹಿಸಲು ಡಾ. ಹೆಚ್.ಎಸ್. ನಾಗೇಂದ್ರಸ್ವಮಿಯವರು ಸಲಹೆ ನೀಡಿದರು.

**<u>ಕಾರ್ಯನಿರ್ವಾಹಕ ಕಾರ್ಯದರ್ಶಿಗಳವರ ಸಲಹೆಗಳು:</u>**

- ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲು ನಮ್ಮ ಇತರೆ ಸಂಸ್ಥೆಗಳ ಅಧ್ಯಾಪಕರುಗಳನ್ನು ಆಹ್ವಾನಿಸಿ ಅವರಿಂದ ತರಬೇತಿ ಕೊಡಿಸಲು ತಿಳಿಸಿದರು. ಬೇರೆ ಸಂಸ್ಥೆಗಳ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತುದಾರರನ್ನು ಆದಷ್ಟು ಕಡಿಮೆ ಮಾಡಿ ಎಂದು ತಿಳಿಸಿದರು.
- ಲೇಖನ ಪ್ರಕಟಿಸಲು ಕ್ರಮವಹಿಸದ ಉಪನ್ಯಾಸಕರುಗಳಿಗೆ ನೋಟೀಸ್ ನೀಡಿ ವಿವರಣೆ ಪಡೆಯಲು ಕಾರ್ಯನಿರ್ವಾಹಕ ಕಾರ್ಯದರ್ಶಿಗಳು ತಿಳಿಸಿದರು.
- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಜಿಲ್ಲೆಯಲ್ಲಿರುವ IAS/KAS ಅಧಿಕಾರಿಗಳನ್ನು ಸಂಪರ್ಕಿಸಿ ಅವರನ್ನು ಆಹ್ವಾನಿಸಿ, ಉಪನ್ಯಾಸ ಮಾಡಿಸಲು ತಿಳಿಸಿದರು.
- ವೆಬ್‌ಸೈಟ್‌ಗಳಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕಡ್ಡಾಯವಾಗಿ ಹಾಕಿಸಿ ಪ್ರಚಾರ ಮಾಡುವಂತೆ ತಿಳಿಸಿದರು.
- ಅಧ್ಯಾಪಕರುಗಳಿಗೆ ವಿಚಾರ ಸಂಕಿರಣ/ವೆಬಿನಾರ್‌ಗಳಲ್ಲಿ ಭಾಗವಹಿಸಲು ತಿಳಿಸಿದ್ದರು ಕೂಡ ಭಾಗವಹಿಸದ ಮತ್ತು ಮಾಹಿತಿ ನೀಡದ ಅಧ್ಯಾಪಕರುಗಳಿಗೆ ಕ್ರಮಕೈಗೊಳ್ಳಲು ತಿಳಿಸಿದರು.
- ಮುಂದಿನ ಸಭೆಯಲ್ಲಿ PPT ಗಳನ್ನು ಸಿದ್ದಪಡಿಸುವಾಗ ವಿವರವಾಗಿ ಬೇಡ ಬದಲಾಗಿ ಬುಲೆಟಿನ್ ಮತ್ತು ಫೋಟೋಗಳನ್ನು ಮಾತ್ರ ಹಾಕಿ ಪ್ರಸ್ತುತಪಡಿಸಲು ತಿಳಿಸಿದರು.
- ಆನ್‌ಲೈನ್ ಮೂಲಕ ಕಾರ್ಯಕ್ರಮ/ಸಭೆಗಳನ್ನು ನಡೆಸಲು ಬೇಕಾಗುವ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದು ತಿಳಿಸಿದರು.

**ವಂದನಾರ್ಪಣೆ:** ಶ್ರೀ ಜಿ.ಸಿ. ಬಸವರಾಜು ರವರ ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು.

ಱಱಱಱ

ಪ್ರಾಂಶುಪಾಲರು
ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ-571 111